ಕನ್ನಡ ಪೋಸ್ಟ್
KANNADA POST
ಸಂಪಾದಕ : ಮಂಜು ಬನವಾಸೆ
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಹಾಸನ    E-mail : kannadapostnews@gmail.com    / ಕನ್ನಡ post    Price: ₹1
Vol.No.02 | Issue. 11 | Pages. 2 | Date: 05-12-2025, FRIDAY    RNI NO: KARKAN/2024/89601    Kannada Daily
ಸಂಪುಟ : 02 - ಸಂಚಿಕೆ : 11 - ಪುಟಗಳು : 2    05-12-2025    ಶುಕ್ರವಾರ    Ph: 8762954248    ದರ : ₹1

# ಹಾಸನ ನಗರಕ್ಕೆ ಔಟರ್ ರಿಂಗ್ ರೋಡ್ ನಿರ್ಮಾಣಕ್ಕೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಒತ್ತಾಯ

## ನಿತಿನ್ ಗಡ್ಕರಿ ಭೇಟಿ ಮಾಡಿ ಮನವಿ ಪತ್ರ ನೀಡಿದ ಎಚ್.ಡಿ. ಕುಮಾರಸ್ವಾಮಿ ಹಾಗೂ ರೇವಣ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ನವದೆಹಲಿಯಲ್ಲಿ ಗುರುವಾರ ಕೇಂದ್ರ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರು ಹಾಸನ ನಗರದ ವಾಹನ ದಟ್ಟಣೆ ನಿರ್ವಹಣೆ ಹಾಗೂ 2030ರಲ್ಲಿ ನಡೆಯಲಿರುವ ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕದ ಸಿದ್ಧತೆಯಾಗಿ ನಗರಕ್ಕೆ ಹೊರ ವರ್ತುಲ ರಸ್ತೆ ನಿರ್ಮಿಸುವಂತೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಒತ್ತಾಯಿಸಿರುವ ಪತ್ರವನ್ನು ಅವರಿಗೆ ನೀಡಿ ಮನವಿ ಸಲ್ಲಿಸಿದರು. ಹಾಸನ ಜಿಲ್ಲೆಯನ್ನು ಅಂತಾರಾಷ್ಟ್ರೀಯ ಪ್ರವಾಸಿ ಸರ್ಕ್ಯೂಟ್‌ಗೆ ಸೇರಿಸುವ ನಿಟ್ಟಿನಲ್ಲಿ ಹಾಸನ ನಗರದ ಪೂರ್ವ ಭಾಗದಲ್ಲಿ ಔಟರ್ ರಿಂಗ್ ರೋಡ್ ನಿರ್ಮಾಣಕ್ಕೆ ಮಾಜಿ ಪ್ರಧಾನಿ ಹಾಗೂ ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ ಅವರು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಬರೆದಿರುವ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಶಾಂತಿಗ್ರಾಮ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ-75 ಅನ್ನು ಹಾಸನ ವಿಮಾನ ನಿಲ್ದಾಣದ ಮೂಲಕ ಹಾಗೂ ಹೂವಿನಹಳ್ಳಿ ಕಾವಲ್ ಬಳಿ ರಾಷ್ಟ್ರೀಯ ಹೆದ್ದಾರಿ-373 ಜೊತೆ ಸಂಪರ್ಕಿಸುವ ಹೊರ ವರ್ತುಲ ರಸ್ತೆಯನ್ನು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯದ ನಗರ ಟ್ರಾಫಿಕ್ ಡಿಕಂಜೆಷನ್ ಯೋಜನೆಯಡಿ ನಿರ್ಮಿಸಬೇಕೆಂದು ಗೌಡರು ಆಗ್ರಹಿಸಿದ್ದಾರೆ. ಈಗಾಗಲೇ ಈ ಕುರಿತು ಹಲವು ಬಾರಿ ಪತ್ರ ಬರೆದರೂ ಸ್ಪಂದನೆ ದೊರೆತಿಲ್ಲ ಎಂದು ವಿಷಾದ ವ್ಯಕ್ತಪಡಿಸಿರುವ ಅವರು, ಹಾಸನವನ್ನು ದ್ವಿತೀಯ ಶ್ರೇಣಿಯ ನಗರವೆಂದು ಗುರುತಿಸಲಾಗಿದ್ದು, ಕೈಗಾರಿಕಾ ಬೆಳವಣಿಗೆ ಕೇಂದ್ರವಾಗಿ ಬೆಳೆಯುತ್ತಿದೆ ಎಂದು ನೆನಪಿಸಿದ್ದಾರೆ.



### ಮಹಾಮಸ್ತಕಾಭಿಷೇಕ : 2030

12 ವರ್ಷಕ್ಕೊಮ್ಮೆ ನಡೆಯುವ ಈ ಮಹೋತ್ಸವದಲ್ಲಿ 50-60 ಲಕ್ಷ ಭಕ್ತರು-ಪ್ರವಾಸಿಗರು ಆಗಮಿಸುತ್ತಾರೆ ಎಂದು ಅಂದಾಜಿಸಲಾಗಿದೆ. 2018ರಲ್ಲಿ ನಡೆದ ಕಳೆದ ಮಹಾಮಸ್ತಕಾಭಿಷೇಕದಲ್ಲೂ ಲಕ್ಷಾಂತರ ಜನ ಸೇರಿದ್ದರು. ಆದರೆ ಪ್ರಸ್ತುತ ರಸ್ತೆ ಸೌಲಭ್ಯ ಸಮರ್ಪಕವಾಗಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಸಕಲೇಶಪುರ, ಬೇಲೂರು, ಅರಕಲಗೂಡು ತಾಲ್ಲೂಕುಗಳಲ್ಲಿರುವ ಪಶ್ಚಿಮ ಘಟ್ಟದ ಸೊಬಗು, ಆಹ್ಲಾದಕರ ಹವಾಮಾನ ಮತ್ತು ಹೋಮ್‌ಸ್ಟೇಗಳಿಂದ ವರ್ಷವಿಡೀ ಲಕ್ಷಾಂತರ ಪ್ರವಾಸಿಗರು ಆಕರ್ಷಿತರಾಗುತ್ತಾರೆ. ಆದರೆ ರಸ್ತೆ ಸೌಕರ್ಯದ ಕೊರತೆಯಿಂದ ಅಂತಾರಾಷ್ಟ್ರೀಯ ಮಟ್ಟದ ಪ್ರವಾಸೋದ್ಯಮ ಬೆಳೆಯುತ್ತಿಲ್ಲ ಎಂದು ಪತ್ರದಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ.

ನಿಮ್ಮ ನಾಯಕತ್ವದಲ್ಲಿ ಈ ಯೋಜನೆ ಅನುಷ್ಠಾನವಾದರೆ, ಲಕ್ಷಾಂತರ ಜನರಿಗೆ ಅನುಕೂಲವಾಗಲಿದೆ ಮತ್ತು ರಾಷ್ಟ್ರೀಯ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

2030ರ ಮಹಾಮಸ್ತಕಾಭಿಷೇಕಕ್ಕೂ ಮುನ್ನ ಹಾಸನಕ್ಕೆ ನಾಲ್ಕು ಪಥದ ಹೊರ ವರ್ತುಲ ರಸ್ತೆ ನಿರ್ಮಾಣ ಅಗತ್ಯ. ಕರ್ನಾಟಕ ಸರ್ಕಾರ ಸಲ್ಲಿಸಿರುವ ಯೋಜನಾ ಸಾಧ್ಯತಾ ವರದಿಯನ್ನು ಪರಿಶೀಲಿಸಿ, ನಗರ ಟ್ರಾಫಿಕ್ ಡಿಕಂಜೆಷನ್ ಯೋಜನೆಯಡಿ ಹಣಕಾಸು ಅನುಮೋದಿಸಬೇಕು. ಇದು ನಗರ ಮೂಲಸೌಕರ್ಯ ಬಲಪಡಿಸುವುದಲ್ಲದೆ ಸ್ಥಳೀಯ ಆರ್ಥಿಕತೆಗೂ ಉತ್ತೇಜನ ನೀಡಲಿದೆ.
**- ಎಚ್.ಡಿ. ದೇವೇಗೌಡ, ಮಾಜಿ ಪ್ರಧಾನಿ**

### ಹಾಸನದ ಪ್ರಾಮುಖ್ಯತೆಯನ್ನು ಅವರು ಈ ರೀತಿ ವಿವರಿಸಿದ್ದಾರೆ

- ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ
- ನಾಲ್ಕು ವಿಶೇಷ ಆರ್ಥಿಕ ವಲಯಗಳು ಇದರಲ್ಲಿ 265 ಎಕರೆ ವಿಸ್ತೀರ್ಣದ ಆಹಾರ ಸಂಸ್ಕರಣಾ SEZ
- ಹಲವು ವೈದ್ಯಕೀಯ, ತಾಂತ್ರಿಕ ಮತ್ತು ಕೃಷಿ ಕಾಲೇಜುಗಳು, ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ಕೇಂದ್ರಗಳು
- ಯುನೆಸ್ಕೋ ವಿಶ್ವ ಪರಂಪರೆ ತಾಣಗಳಾದ ಬೇಲೂರು-ಹಳೇಬೀಡು ಹೊಯ್ಸಳ ಸ್ಮಾರಕಗಳು (2023ರಲ್ಲಿ ಘೋಷಣೆ)
- 57 ಅಡಿ ಎತ್ತರದ ಏಕಶಿಲಾ ಗೊಮಟೇಶ್ವರ (ಬಾಹುಬಲಿ) ಪ್ರತಿಮೆ ಶ್ರವಣಬೆಳಗೊಳ

# ಬೇಲೂರು-ಹಾಸನ ರಾಷ್ಟ್ರೀಯ ಹೆದ್ದಾರಿ 373 ಪರಿಷ್ಕೃತ ವೆಚ್ಚಕ್ಕೆ ಮಂಜೂರಾತಿ ನೀಡಿ

## ಗಡ್ಕರಿ ಭೇಟಿ ಮಾಡಿದ ಸಂಸದ ಶ್ರೇಯಸ್ ಪಟೇಲ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ/ನವದೆಹಲಿ: ಬೇಲೂರು-ಹಾಸನ ರಾಷ್ಟ್ರೀಯ ಹೆದ್ದಾರಿ-373ರ ಪರಿಷ್ಕೃತ ಅಂದಾಜು ವೆಚ್ಚಕ್ಕೆ ತಕ್ಷಣದ ಮಂಜೂರಾತಿ ನೀಡುವಂತೆ ಕೇಂದ್ರ ರಾಷ್ಟ್ರೀಯ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಮಾಡಲಾಗಿದೆ ಎಂದು ಹಾಸನ ಸಂಸದ ಶ್ರೇಯಸ್ ಎಂ. ಪಟೇಲ್ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಸಚಿವರನ್ನು ಭೇಟಿಯಾದ ಸಂಸದ ಶ್ರೇಯಸ್ ಪಟೇಲ್ ಅವರು, 2022-23ರಲ್ಲಿ ಅನುಮೋದನೆಗೊಂಡಿದ್ದ ಈ ಕಾಮಗಾರಿಗೆ ಗುತ್ತಿಗೆ ನೀಡಿರುವುದಾಗಿ, ಆದರೆ ಪರಿಷ್ಕೃತ ವೆಚ್ಚ ಅಂದಾಜು ಮಂಜೂರಾಗದ ಕಾರಣ ದಿಂದಲೇ ಯೋಜನೆ ಮುಂದುವರಿಯದೇ ಬಾಕಿ ಉಳಿದಿದೆ ಎಂದು ತಿಳಿಸಿದ್ದಾರೆ. ಪ್ರಸ್ತುತ ಖಅಇ ಪ್ರಸ್ತಾವನೆ ಬೆಂಗಳೂರು ಪ್ರಾದೇಶಿಕ ಕಚೇರಿ ಮಟ್ಟದಲ್ಲಿ ಪರಿಶೀಲನೆಗಾಗಿ ನಿಲುಕಿರುವುದರಿಂದ ನೇಮಕ ದಿನಾಂಕ ಘೋಷಣೆಯೂ ಸಾಧ್ಯವಾಗಿಲ್ಲ. ಇದರಿಂದ ಗುತ್ತಿಗೆದಾರರು ಕಾರ್ಯಾರಂಭ ಮಾಡಲು ವಿಳಂಬವಾಗಿದೆ ಎಂದು ಅವರು ತಿಳಿಸಿದ್ದಾರೆ.

ಬೇಲೂರು?ಹಾಸನ ರಸ್ತೆ ಜಿಲ್ಲೆಯ ಪ್ರಮುಖ ಸಂಚಾರ ಮಾರ್ಗವಾಗಿದ್ದು ಸ್ಥಳೀಯ ನಾಗರಿಕರು, ಪ್ರವಾಸಿಗರು, ಕೃಷಿಕರು ಹಾಗೂ ಅಂತಾರಾಜ್ಯ ವಾಹನ ಸವಾರರು ಹೆಚ್ಚಿನ ಪ್ರಮಾಣದಲ್ಲಿ ಬಳಸುವ ಹೆದ್ದಾರಿಯಾಗಿದೆ. ನಿರಂತರ ಮಳೆ ಹಾಗೂ ಭಾರೀ ವಾಹನ ಸಂಚಾರದಿಂದ ರಸ್ತೆಯ ಸ್ಥಿತಿ ಹದಗೆಟ್ಟಿದ್ದು ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಜನರ ಸುರಕ್ಷತೆಯ ವಿಷಯದಲ್ಲೂ ಆತಂಕ ಹೆಚ್ಚಾಗಿದೆ ಎಂದು ಸಂಸದರು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಪರಿಷ್ಕೃತ ವೆಚ್ಚಕ್ಕೆ ತ್ವರಿತ ಮಂಜೂರಾತಿ ನೀಡಿ, ಕಾಮಗಾರಿಯನ್ನು ಶೀಘ್ರ ಪ್ರಾರಂಭಿಸುವಂತೆ ಕೇಂದ್ರ ಸಚಿವರನ್ನು ವಿನಂತಿಸಿದ್ದಾಗಿ ಸಂಸದ ಶ್ರೇಯಸ್ ಪಟೇಲ್ ತಿಳಿಸಿದ್ದಾರೆ.

# ರಸ್ತೆ ಕಾಮಗಾರಿ ವಿರುದ್ಧ ಅಪಪ್ರಚಾರ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾಲಗಾಮೆಯಿಂದ ಮಾದಿಹಳ್ಳಿ ಗೇಟ್ ವರೆಗೆ ಪ್ರಗತಿ ಹಂತದಲ್ಲಿರುವ ಸುಮಾರು 5 ಕಿ.ಮೀ ರಸ್ತೆ ಕಾಮಗಾರಿ ಬಗ್ಗೆ ಕೆಲ ಕಿಡಿಗೇಡಿಗಳು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ಜೆಡಿಎಸ್ ಮುಖಂಡರು ತೀವ್ರ ಅಕ್ರೋಶ ವ್ಯಕ್ತಪಡಿಸಿದರು.

ಸಾಲಗಾಮೆ ಬಳಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾಲಗಾಮೆಯಿಂದ ಮಾದಿಹಳ್ಳಿ ಗೇಟ್ ವರೆಗೆ ಸುಮಾರು 12 ಕೋಟಿ ವೆಚ್ಚದಲ್ಲಿ ಶಾಸಕ ಸ್ವರೂಪ ಪ್ರಕಾಶ್ ರಸ್ತೆ ಮಂಜೂರು ಮಾಡಿ ಗುದ್ದಲಿ ಪೂಜೆಯನ್ನು ನೆರವೇರಿಸಿದ್ದಾರೆ ಈಗಾಗಲೇ ಕಾಮಗಾರಿ ಪ್ರಗತಿ ಹಂತದಲ್ಲಿದ್ದು, ಮಳೆ ಹಾಗೂ ಇನ್ನಿತರ ಕಾರಣಗಳಿಂದ ಕಾಮಗಾರಿ ಸ್ವಲ್ಪ ವಿಳಂಬವಾಗಿದೆ ಆದರೆ ಕೆಲ ಕಿಡಿಗೇಡಿಗಳು ಇದನ್ನೇ ಮುಂದಿಟ್ಟುಕೊಂಡು ರಸ್ತೆ ಬಗ್ಗೆ ಹಾಗೂ ಶಾಸಕರ ಬಗ್ಗೆ ಅಪಪ್ರಚಾರ ಮಾಡುವ ಕೆಲಸ ಮಾಡುತ್ತಿದ್ದಾರೆ ಇದನ್ನು ಜೆಡಿಎಸ್ ಕಾರ್ಯಕರ್ತರು ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.



### ಜೆಡಿಎಸ್ ಮುಖಂಡರ ಆಕ್ರೋಶ

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶಾಸಕರಿಗೆ ಅನುದಾನವಿಲ್ಲದೆ ಪರದಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ ಕೇವಲ ಜೆಡಿಎಸ್ ಶಾಸಕರಿಗೆ ಮಾತ್ರವಲ್ಲ ಬಿಜೆಪಿ ಹಾಗೂ ಕಾಂಗ್ರೆಸ್ ಶಾಸಕರಿಗೂ ಅನುದಾನವಿಲ್ಲದೆ ಕೇವಲ ಗ್ಯಾರಂಟಿ ಯೋಜನೆಗಳಿಗಾಗಿ ಸರ್ಕಾರ ಹಣ ವ್ಯಯ ಮಾಡುತ್ತಿದೆ ಇಂತಹ ಸಂದರ್ಭದಲ್ಲಿಯೂ ಶಾಸಕ ಸ್ವರೂಪ ಪ್ರಕಾಶ್ ತನ್ನ ಅನುದಾನದಲ್ಲಿ ಜನರ ಹಿತ ದೃಷ್ಟಿಯಿಂದ ರಸ್ತೆ ಮಂಜೂರು ಮಾಡಿ ಕೆಲಸ ಆರಂಭಿಸಿದ್ದಾರೆ ಆದರೆ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ರಸ್ತೆಯ ಬಗ್ಗೆ ಮನಬಂದಂತೆ ಮಾತನಾಡಿ ಅಪಪ್ರಚಾರ ಮಾಡುತ್ತಿರುವುದು ಖಂಡನೀಯ ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಸರಳ ಸಜ್ಜನಿಕೆಯ ಗುಣಗಳುಳ್ಳ ಶಾಸಕ ಸ್ವರೂಪ ಅವರು ಜನರ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸಿ ಪ್ರತಿ ಹಳ್ಳಿ ಹಳ್ಳಿಗಳಿಗೂ ಭೇಟಿ ನೀಡಿ ತಮ್ಮ ಶಕ್ತಿಮೀರಿ ಅನುದಾನ ತಂದು ಎಲ್ಲಾ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಶ್ರಮ ವಹಿಸುತ್ತಿದ್ದಾರೆ ಆದರೆ ಕೆಲವರು ಶಾಸಕರು ಗ್ರಾಮಗಳಿಗೆ ಭೇಟಿ ನೀಡುತ್ತಿಲ್ಲ ಎಂಬ ಮಾತುಗಳನ್ನಾಡಿರುವುದು ಸಹಿಸಲಾಗದು. ಈ ಹಿಂದಿನ ಶಾಸಕರಾಗಿದ್ದ ಪ್ರೀತಮ್ ಗೌಡ ಅವರು ಚುನಾವಣೆಯಲ್ಲಿ ಗೆದ್ದ ನಂತರ ಕ್ಷೇತ್ರವನ್ನೇ ಮರೆತಿದ್ದರು ಆದರೆ ಸ್ವರೂಪ್ರಕಾಶ್ ಅವರು ಇಂದಿಗೂ ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ತಮ್ಮ ಕ್ಷೇತ್ರದ ಜನರ ಸಮಸ್ಯೆಗಳನ್ನು ಹಾಲಿಸುವ ಕೆಲಸ ಮಾಡುತ್ತಿದ್ದಾರೆ ಅಂತವರ ವಿರುದ್ಧ ಅಪಪ್ರಚಾರ ಸಲ್ಲದು ಎಂದರು.

ಕೇವಲ ಸಾಲಗಾಮೆ ಕ್ಷೇತ್ರ ಮಾತ್ರವಲ್ಲದೆ ಎಲ್ಲಾ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಯ ಕನಸನ್ನಿಟ್ಟುಕೊಂಡಿರುವ ಶಾಸಕ ಸ್ವರೂಪ ಪ್ರಕಾಶ್ ಯಾವುದೇ ರೀತಿಯ ರಿಯಲ್ ಎಸ್ಟೇಟ್ ನಲ್ಲಿ ತೊಡಗಿಲ್ಲ, ಕಳಂಕ ರಹಿತ ರಾಜಕಾರಣಿಯಾಗಿ, ಭ್ರಷ್ಟಾಚಾರ ರಹಿತ ಆಡಳಿತ ನಡೆಸುತ್ತಿದ್ದಾರೆ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದರೆ ಮುಂದಿನ ದಿನಗಳಲ್ಲಿ ತಕ್ಕ ಉತ್ತರ ಕೊಡಬೇಕಿಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಜೆಡಿಎಸ್ ಮುಖಂಡರಾದ ನೀಲಕಂಠ, ಶಿವಲಿಂಗಯ್ಯ, ರಿತೇಶ್, ಪ್ರತಾಪ್, ಯೋಗೀಶ್, ವಾಸು, ಸಚಿನ್, ಅನಿಲ್, ನಿಖಿಲ್, ಯಶವಂತ್ ಇತರರು ಇದ್ದರು

# ಬೆಂಬಲ ಬೆಲೆಯಲ್ಲಿ ಜೋಳ ಖರೀದಿಗೆ ಆಗ್ರಹ

## ಇಲ್ಲದಿದ್ದರೆ ಮತ್ತೊಮ್ಮೆ ಧರಣಿ: ಜಿಲ್ಲಾಡಳಿತಕ್ಕೆ ರೈತಸಂಘ ಎಚ್ಚರಿಕೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಿಳಿಸುಳಿ ರೋಗದಿಂದ ಮೆಕ್ಕೆಜೋಳ ಕಳೆದುಕೊಂಡಿರುವ ಎಲ್ಲ ರೈತರಿಗೆ ಸೂಕ್ತ ಪರಿಹಾರ ಕೊಡಬೇಕು.

ಇಲ್ಲದಿದ್ದರೆ ಮತ್ತೆ ಪ್ರತಿಭಟನೆ ಆರಂಭಿಸುವುದಾಗಿ ಕರ್ನಾಟಕ ರಾಜ್ಯ ರೈತಸಂಘ-ಹಸಿರು ಸೇನೆ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಎಚ್ಚರಿಕೆ ನೀಡಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಡಿಸಿ ಕಚೇರಿ ಎದುರು ಹಗಲು-ರಾತ್ರಿ ಚಳುವಳಿ ಮಾಡಿದಾಗ ರೈತರಿಂದ 30 ಸಾವಿರ ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿ ಮಾಡುವುದಾಗಿ ಭರವಸೆ ನೀಡಿದ್ದರು.

ಆದರೀಗ ಕೇವಲ 10 ಸಾವಿರ ಮೆಟ್ರಿಕ್ ಟನ್ ಮಾತ್ರ ಖರೀದಿ ಮಾಡಲು ಮುಂದಾಗಿದ್ದಾರೆ ಎಂದು ದೂರಿದರು. ಡಿಸಿ ಅವರ ಎದುರಿಗೆ ಒಬ್ಬ ರೈತರಿಂದ 50 ಕ್ವಿಂಟಾಲ್ ಮೆಕ್ಕೆಜೋಳ ಖರೀದಿ ಮಾಡುವುದಾಗಿ ಅಧಿಕಾರಿಗಳು ಹೇಳಿ, ಈಗ ಕೇವಲ 20 ಕ್ವಿಂಟಾಲ್ ಮಾತ್ರ ಖರೀದಿಸಲು ಮುಂದಾಗಿದ್ದಾರೆ ಎಂದು ದೂರಿದರು.

ಜಿಲ್ಲೆಯಲ್ಲಿ ಸುಮಾರು 1 ಲಕ್ಷ ರೈತರು ಮೆಕ್ಕೆಜೋಳ ಬೆಳೆದಿದ್ದರು. ಆದರೆ 4500 ರೈತರಿಂದ ಮಾತ್ರ ಜೋಳ ಖರೀದಿ ಮಾಡುವುದಾಗಿ ಹೇಳುತ್ತಿದ್ದಾರೆ. ಆದ್ದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೂಡಲೇ ಖರೀದಿ ಕೇಂದ್ರ ತೆರೆದು ಎಲ್ಲ ಜೋಳ ಖರೀದಿ ಮಾಡಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯಲ್ಲಿ ಸುಮಾರು 12 ಸಾವಿರ ರೈತರು ಬಿಳಿಸುಳಿಯಿಂದ ಜೋಳ ಕಳೆದುಕೊಂಡಿದ್ದಾರೆ. ಇವರಿಗೆ ತಕ್ಷಣ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ವಿಪರ್ಯಾಸ ಎಂದರೆ ಬೇರೆ ಬೇರೆ ಜಿಲ್ಲೆಗಳಿಗೆ ಮೆಕ್ಕೆಜೋಳ ಪರಿಹಾರಕ್ಕೆ 16 ಕೋಟಿವರೆಗೂ ಹಣ ನೀಡಿರುವ ಸರ್ಕಾರ ನಮ್ಮ ಜಿಲ್ಲೆಗೆ ಕೇವಲ ಎರಡೂವರೆ ಕೋಟಿ ರೂ. ನೀಡಿದೆ. ಇದರಲ್ಲೂ ತಾರತಮ್ಯ ಮಾಡಲಾಗಿದೆ. ಕೂಡಲೇ ಹೆಚ್ಚುವರಿ ಪರಿಹಾರ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಇಲಾಖೆಗಳ ಎದುರು ಮತ್ತೊಮ್ಮೆ ಹೋರಾಟ ಮುಂದುವರಿಸುವುದಾಗಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಅಧ್ಯಕ್ಷ ಮಂಜೇಗೌಡ, ಶೇಷಣ್ಣ, ತಾರಾನಾಥ್, ಮಲ್ಲೇಶ್, ವಿರೂಪಾಕ್ಷ ಇದ್ದರು.

# ಜಗಳ ಬಿಡಿಸಲು ಹೋದವನ ಮೇಲೆ ಮಚ್ಚಿನಿಂದ ಹಲ್ಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೊಳೆನರಸೀಪುರ ತಾಲೂಕಿನ ಓಡನಹಳ್ಳಿಯಲ್ಲಿ ಕೆಲವು ವ್ಯಕ್ತಿಗಳ ನಡುವೆ ನಡೆಯುತ್ತಿದ್ದ ಗಲಾಟೆ ತಡೆಯಲು ಹೋದ ವ್ಯಕ್ತಿಯ ಮೇಲೆ ಮೂವರು ಯುವಕರು ತೀವ್ರವಾಗಿ ಹಲ್ಲೆ ನಡೆಸಿದ್ದಾರೆ.

ಹೊನ್ನಾಲಮ್ಮನ ಕೊಪ್ಪಲು ಗ್ರಾಮದ ಗಣೇಶ್ ಅವರ ತಲೆಗೆ ಕಿರಣ್, ಸಚಿನ್, ರವಿ ಎಂಬವರು ಮಚ್ಚಿನಿಂದ ಹಲ್ಲೆ ನಡೆಸಿದ್ದು, ಅವರನ್ನು ಹಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬುಧವಾರ ಗಣೇಶ್ ಅವರು ಮನೆಯಿಂದ ಭತ್ತವನ್ನು ಮಿಲ್ ಮಾಡಿಕೊಂಡು ಬರಲು ಆಟೋದಲ್ಲಿ ಮನೆಯಿಂದ ಭತ್ತದ ಚೀಲಗಳ್ನು ತೆಗೆದುಕೊಂಡು ಹೋಗಿದ್ದು, ಸಂಜೆ ಸುಮಾರು 6 ಗಂಟೆ ಸಮಯದಲ್ಲಿ ಓಡನಹಳ್ಳಿ ಗ್ರಾಮಕ್ಕೆ ಭತ್ತ ಮಿಲ್ ಮಾಡಿಸಿಕೊಂಡು ಬರಲು ಓಡನಹಳ್ಳಿ ಗ್ರಾಮದ ರೈಸ್ ಮಿಲ್ ಗೆ ಹೋಗಿದ್ದಾಗ ಓಡನಹಳ್ಳಿ ಗ್ರಾಮದ ಕೆಲವರ ಜತೆ ಆರೋಪಿಗಳು ಜಗಳವಾಡುತ್ತಿರುವುದನ್ನು ಕಂಡು ಅದನ್ನು ತಡೆಯಲು ಯತ್ನಿಸಿದರು.

ಇದರಿಂದ ಸಿಟ್ಟಿಗೆದ್ದ ಆರೋಪಿಗಳು ಕೊಲೆ ಮಾಡುವ ಉದ್ದೇಶದಿಂದ ತಮ್ಮ ಪತಿ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಗಣೇಶ್ ಅವರ ಪತ್ನಿ ಮಮತಾ ಹಳ್ಳಿಮೈಸೂರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

# ಡಿ.6 ರಂದು ಸರ್ಕಾರಿ ಸೇವೆ ಸಮರ್ಪಣಾ ಸಮಾವೇಶ

## ಸಿಎಂ-ಡಿಸಿಎಂ ಹಾಗೂ ಸಚಿವರು ಜಿಲ್ಲೆಗೆ ಆಗಮನ : ಡಿಸಿ ಲತಾ ಕುಮಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇದೇ ತಿಂಗಳ 6 ರಂದು ಸಿಎಂ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಸ್ತುವಾರಿ ಹಾಗೂ ಇತರೆ ಸಚಿವರು ಜಿಲ್ಲೆಗೆ ಆಗಮಿಸುತ್ತಿದ್ದು, ವಿವಿಧ ಇಲಾಖೆಗಳ ಸುಮಾರು 70 ಸಾವಿರ ಫಲಾನುಭವಿಗಳಿಗೆ ಸರ್ಕಾರದ ಸೇವೆಗಳನ್ನು ಸಮರ್ಪಣೆ ಮಾಡಲಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದರು.

ಇಂದು ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಉಸ್ತುವಾರಿ ಸಚಿವರಾದ ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ಸಮಾವೇಶ ನಡೆಯಲಿದೆ ಎಂದರು. ಸಮಾವೇಶದ ಮುಖ್ಯ ಉದ್ದೇಶ ಸರಕಾರದ ಸವಲತ್ತುಗಳನ್ನು ನೇರವಾಗಿ ಅರ್ಹ ಫಲಾನುಭವಿಗಳಿಗೆ ವಿತರಿಸುವುದಾಗಿದೆ. 70 ಸಾವಿರ ಪಲಾನುಭವಿಗಳಲ್ಲಿ ಹೆಚ್ಚಾಗಿ ಕಂದಾಯ ಇಲಾಖೆಗೆ ಸೇರಿದವರಾಗಿದ್ದಾರೆ ಎಂದರು. ಸಮಾವೇಶಕ್ಕಾಗಿ ಎಲ್ಲ ಸಿದ್ಧತೆ ನಡೆದಿದೆ. ಅಂದು ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗಿ 3 ಗಂಟೆಯೊಳಗೆ ಮುಗಿಯಲಿದೆ ಎಂದು ನುಡಿದರು.



ಕಳೆದ 2 ವರ್ಷಗಳ ಅವಧಿಯಲ್ಲಿ ಕಂದಾಯ ಇಲಾಖೆಯಲ್ಲಿ ಕ್ರಾಂತಿಕಾರಿ ಸಾಧನೆ ಆಗಿದೆ. ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಪೋಡಿ, ದರಕಾಸ್ತು ಕೆಲಸಗಳನ್ನು ಅಭಿಯಾನ ರೂಪದಲ್ಲಿ ಬಹುತೇಕ ಪೂರ್ಣಗೊಳಿಸಲಾಗಿದೆ. 12 ಸಾವಿರ ಹೊಸ ಪಹಣಿ ಸೃಜಿಸಲಾಗಿದೆ. ಸರ್ಕಾರದ ಜಮೀನನ್ನು ಅನೇಕ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದರೂ ಪೋಡಿ ಆಗಿರಲಿಲ್ಲ, ಅದಕ್ಕಾಗಿ ರೈತರು ಅಲೆದು ಬಸವಳಿದಿದ್ದರು. ಇದನ್ನು ತಪ್ಪಿಸಲು ಆಂದೋಲನ ರೂಪದಲ್ಲಿ ಕೆಲಸ ಮಾಡಿ ರಾಜ್ಯದಲ್ಲೇ ಹಾಸನ ಪೋಡಿ, ದರಕಾಸ್ತು ವಿಷಯದಲ್ಲಿ ಮೊದಲ ಸ್ಥಾನದಲ್ಲಿದೆ. ಸಮಾವೇಶದಲ್ಲಿ 12 ಫಲಾನುಭವಿಗಳಿಗೆ ಪಹಣಿ, ಮ್ಯುಟೇಷನ್, ಆಕಾರ್ ಬಂದ್, ಟಿಪ್ಪಣಿ ಸ್ಕೆಚ್ ಒಳಗೊಂಡ ಫೋಲ್ಡರ್ ನೀಡಲಾಗುವುದು ಎಂದರು. 19 ಲಕ್ಷದ ಪೈಕಿ, ಇ ಪೌತಿ ಅಭಿಯಾನದಡಿ 18 ಲಕ್ಷ ಆರ್‌ಟಿಸಿಗೆ ಆಧಾರ್ ಜೋಡಣೆ ಮಾಡಲಾಗಿದೆ. ಇದು ರಾಜ್ಯದಲ್ಲೇ ಮೊದಲು ಎಂದರು. 2 ಲಕ್ಷ ಪಹಣಿದಾರರಿಗೆ ವಾರಸುದಾರರು ಇರಲಿಲ್ಲ, ಆಂದೋಲನ ಮಾಡಿ ಇಂಡೀಕರಣ ಮೂಲಕ ಪಹಣಿ ಮಾಡಿಕೊಡುವ ಮೂಲಕ ಬಡವರು ಸರ್ಕಾರಿ ಕಚೇರಿಗೆ ಅಲೆಯೋದನ್ನು ತಪ್ಪಿಸಲಾಗಿದೆ. 15 ಸಾವಿರ ಇ ಪೌತಿ ಖಾತೆ ಮಾಡಲಾಗಿದೆ ಎಂದರು.

ಹಾಗೆಯೇ ಕಂದಾಯ ಗ್ರಾಮ ಗುರುತಿಸಿ ಅಲ್ಲಿದ್ದ ಗುಂಪಿನ ಕುಟುಂಬಗಳಿಗೆ ಹಕ್ಕುಪತ್ರ ಕೊಡಲಾಗಿದೆ. ಹೀಗೆ 5 ಸಾವಿರ ಹಕ್ಕುಪತ್ರ ನೀಡಲಾಗಿದೆ. ಕಂದಾಯ ಇಲಾಖೆಯೊಂದರಲ್ಲೇ 50 ಸಾವಿರ ಕುಟುಂಬಗಳಿಗೆ ನೇರ ಸಹಾಯ ಆಗಿದೆ ಎಂದು ವಿವರಿಸಿದರು.

**300 ಕೋಟಿ ಯೋಜನೆ:** ಅಂದು ಸಿಎಂ ಹಾಗೂ ಇತರೆ ಗಣ್ಯರು ವಿವಿಧ ಇಲಾಖೆಗಳ ಸುಮಾರು 300 ಕೋಟಿ ಕಾಮಗಾರಿಯ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸುವರು ಎಂದು ಮಾಹಿತಿ ನೀಡಿದರು. ಹಾಸನದ ಪ್ರಜಾಸೌಧ, ಸಕಲೇಶಪುರದ ಮಿನಿವಿಧಾನ ಸೌಧ ಉದ್ಘಾಟನೆ ಆಗಲಿವೆ ಎಂದು ವಿವರಿಸಿದರು.

ಇದೇ ವೇಳೆ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಪ್ರಭಾವಿಗಳಿಗೆ ಮಂಜೂರು ಮಾಡಲಾಗಿದೆ ಎಂಬ ಮಾಜಿ ಸಚಿವ ರೇವಣ್ಣ ಅವರ ಆರೋಪಕ್ಕೆ, ಅವರಿಗೆ ಮಾಹಿತಿ ಕೊರತೆ ಇರಬಹುದು. ನಾನು ಹಾಗೆ ಏನನ್ನೂ ಮಾಡಲ್ಲ ಎಂದು ಪ್ರಶ್ನೆಗ ಉತ್ತರಿಸಿರು. 306 ಆರೋಪ ಹೊತ್ತಿರುವ ಮಹಿಳೆಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗಿದೆ ಎಂಬ ಮತ್ತೊಂದು ದೂರಿಗೆ, ಮಹಿಳೆ ಎಂಬ ಕಾರಣಕ್ಕೆ ಕೊಡಲಾಗಿದೆ. ಬೇರೆ ಏನನ್ನೂ ನಾನು ಪರಿಶೀಲಿಸಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಪ್ರಶಸ್ತಿಗೆ ಆಯ್ಕೆ ಮಾಡುವುದು ನಾನಲ್ಲ, ಎಸಿ ಎಂದು ಹೇಳಿದರು.

ಜಿಪಂ ಸಿಇಒ ಬಿ.ಆರ್.ಪೂರ್ಣಿಮಾ ಇದ್ದರು.

### 1154 ಬಸ್ ವ್ಯವಸ್ಥೆ

ಇದು ಸರ್ಕಾರಿ ಕಾರ್ಯಕ್ರಮ ಆದ್ದರಿಂದ 8 ತಾಲೂಕುಗಳಿಂದ ಫಲಾನುಭವಿಗಳನ್ನು ಕರೆದುಕೊಂಡು ಬರಲು, 1154 ಸಾರಿಗೆ ಬಸ್ ವ್ಯವಸ್ಥೆ ಹಾಗೂ 218 ಖಾಸಗಿ ಬಸ್ ನಿಯೋಜಿಸ ಲಾಗಿದೆ. ಪ್ರತಿ ಬಸ್‌ಗೆ ಒಬ್ಬರಂತೆ ನೋಡೆಲ್ ಅಧಿಕಾರಿ ನೇಮಿಸಲಾಗಿದೆ. ಅವರಿಗೆ ಬೆಳಗಿನ ಉಪಹಾರ, ಕುಡಿಯುವ ನೀರು ಇತ್ಯಾದಿ ವ್ಯವಸ್ಥೆ ಕಲ್ಪಿಸಲಾಗಿದೆ.
**- ಕೆ.ಎಸ್.ಲತಾಕುಮಾರಿ, ಡಿಸಿ**

# ಸುಸ್ಥಿರ ಮನಸ್ಸು-ಸದೃಢ ದೇಹಕ್ಕೆ ಕ್ರೀಡೆ ಪೂರಕ

## ಶ್ರೀ ಆದಿಚುಂಚನಗಿರಿ 28ನೇ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಚುಂಚಶ್ರೀ ಅದ್ದೂರಿ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಬೆಳೆಯುವ ಮಕ್ಕಳಿಗೆ ಕ್ರೀಡೆ ಅತಿಮುಖ್ಯ, ಮನಸ್ಸು ಸುಸ್ಥಿರವಾಗಿರಬೇಕಾದರೆ ದೇಹ ಸದೃಢವಾಗಿರಬೇಕು. ದೇಹ ಸದೃಢವಾಗಿರಲು ಕ್ರೀಡೆ ಪೂರಕ ಎಂದು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಹೇಳಿದರು.

ನ'ಗ'ರ'ದ' ಜಿಲ್ಲಾ ಕ್ರೀಡಾಂಗಣದಲ್ಲಿಂದು ಶ್ರೀ ಆದಿಚುಂಚನಗಿರಿ 28ನೇ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ, ದಿವ್ಯ ಸಾನಿಧ್ಯವಹಿಸಿ ಅವರು ಆಶೀರ್ವಚನ ನೀಡಿದರು.

ಉಸಿರು ಇಲದೆ ದೇಹ ಬದುಕಲ್ಲ, ನೂರು ವರ್ಷದ ಮನುಷ್ಯನ ಬದುಕು ಆರೋಗ್ಯದಿಂದ ಇರಬೇಕಾದರೆ, ಶತಮಾನ ಸಾಗಬೇಕಾದರೆ ಆಟೋಟ ಸಹಾಯಕಾರಿ ಎಂದು ನುಡಿದರು.

ಇದನ್ನು ಮನಗಂಡೇ 28 ವರ್ಷಗಳ ಹಿಂದೆಯೇ ಭೈರವೈಕ್ಯ ಡಾ.ಬಾಲಗಂಗಾಧರ ಮಹಾಸ್ವಾಮೀಜಿ ಅವರು ಈ ಕ್ರೀಡಾಕೂಟ ಆರಂಭಿಸಿದ್ದರು.

ಮೊದಲು ಶಿವಮೊಗ್ಗದಿಂದ ಆರಂಭವಾಗಿ ನಡುವೆ ಎರಡು ವರ್ಷ ಹೊರತು ಪಡಿಸಿದರೆ, ಆರಂಭದಿಂದ ಇಲ್ಲಿಯವರೆಗೂ ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ ಎಂದರು.

ವರ್ಷಕ್ಕೆ ಒಂದೊಂದು ಜಿಲ್ಲೆಯಲ್ಲಿ ಸ್ಪರ್ಧೆ ನಡೆಸಲಾಗುತ್ತಿದೆ. ಈ ಹಿಂದೆ 13ನೇ ರಾಜ್ಯಮಟ್ಟದ ಕ್ರೀಡಾಕೂಟ ಹಾಸನದಲ್ಲಿ ನಡೆದಿತ್ತು. ಈಗ 28ನೇ ವರ್ಷದ ಕ್ರೀಡಾಕೂಟ ಸಹ ಇಲ್ಲೇ ನಡೆಯುತ್ತಿದೆ. ಭಕ್ತರು-ಅಧಿಕಾರಿಗಳ ಸಹಕಾರದಿಂದ ಶ್ರೀ ಶಂಭುನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಚೆನ್ನಾಗಿ ಸಂಘಟನೆ ಆಗಿದೆ ಎಂದು ಶ್ರೀಗಳು ಪ್ರಶಂಸೆ ವ್ಯಕ್ತಪಡಿದರು.

ಇದೇ ವೇಳೆ ಕ್ರಿಕೆಂಟ್ ದಂತಕತೆ ಸಚಿನ್ ತೆಂಡೂಲ್ಕರ್ ಅವರ ಮಾತು ಉದ್ಧರಿಸಿ ಶ್ರೀಗಳು, ನಾವು ಭಾರತೀಯರು ಕ್ರೀಡೆಗೆ ಸಾಕಷ್ಟು ಬೆಂಬಲ, ಉತ್ತೇಜನ ನೀಡುತ್ತೇವೆ. ಅಭ್ಯಾಸ, ತರಬೇತಿ ಪಡೆಯುವಲ್ಲಿ ಹಿಂದೆ ಇದ್ದೇವೆ. ಇದೇ ಕಾರಣಕ್ಕೆ ನಮ್ಮಲ್ಲಿ ವಿಶ್ವದಲ್ಲೇ ಹೆಚ್ಚು ಮಾನವ ಸಂಪನ್ಮೂಲ ಇದ್ದರೂ, ಗಣನೀಯ ಸಾಧನೆ ಮಾಡಲಾಗುತ್ತಿಲ್ಲ. ಇನ್ನು ಮುಂದೆ ನೀವೆಲ್ಲ ಹೆಚ್ಚು ಹೆಚ್ಚು ವಿವಿಧ ಕ್ರೀಡಾಭ್ಯಾಸ ಮಾಡಿ, ಬೆಂಬಲ ಜೊತೆಗೆ ಭಾಗಿಯಾಗಿ, ಜನಸಂಖ್ಯೆಗೆ ತಕ್ಕಂತೆ ಸಾಧನೆ ಮಾಡಿ ಎಂದು ಹರಸಿದರು.

> ಕ್ರೀಡೆಯಿಂದ ಆರೋಗ್ಯ ಚೆನ್ನಾಗಿರಲಿದೆ, ಜೊತೆಗೆ ಮನೋಧೈರ್ಯ ವೃದ್ಧಿಯಾಗಲಿದೆ. ಇದರಿಂದ ಸಮಚಿತ್ತದ ಬದುಕು ರೂಪಿಸಿಕೊಳ್ಳಬಹುದು. ಸೋಲು-ಗೆಲುವು ನೆರಳು-ಬೆಳಕಿನ ಹಾಗೆ, ಒಂದು ಹೋದ ಮೇಲೆ ಮತ್ತೊಂದು ಬರಲಿದೆ. ಹಾಗಾಗಿ ಎಲ್ಲರೂ ಕ್ರೀಡೆಯ ಮಹತ್ವ ಅರ್ಥೈಸಿಕೊಳ್ಳಬೇಕು. ದೇಹ-ಮನಸ್ಸನ್ನು ಚೆನ್ನಾಗಿಟ್ಟುಕೊಳ್ಳಬೇಕೆಂದರೆ ಕ್ರೀಡೆ ಬಹುಮುಖ್ಯ.
>
> **- ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಮಠ**

ಮಾಜಿ ಪ್ರಧಾನಿ ದೇವೇಗೌಡರೂ ಸಹ ಕ್ರೀಡೆ ನನ್ನ ಬದುಕಿನಲ್ಲಿ ಸಾಕಷ್ಟು ಪ್ರಭಾವ ಬೀರಿದೆ. ಇದರಲ್ಲಿ ಸೋಲು-ಗೆಲುವು ಇರುವಂತೆ, ನಾನೂ ರಾಜಕೀಯ ಏಳು-ಬೀಳು ಕಂಡಿದ್ದೇನೆ. ಆದ'ರ' ಕ್ರೀಡಾ ಮನೋಭಾವನೆಯಿಂದ ಸಮಚಿತ್ತದಿಂದ ಸ್ವೀಕಾರ ಮಾಡಿದ್ದೇನೆ. ಇದು ನನಗೆ ಶ್ರೀಮಠ ಕಲಿಸಿದ ಸಂಸ್ಕಾರ ಎಂದಿದ್ದಾರೆ. ಹಾಗಾಗಿ ನೀವೆಲ್ಲರೂ ಕ್ರೀಡೆಯಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಿ ಎಂದು ಕರೆ ನೀಡಿದರು.

ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ ಮಾತನಾಡಿ, ಹಿಂದೆ ಹಾಸನದಲ್ಲಿ ಕ್ರೀಡಾಕೂಟ ನಡೆದಾಗ ನನ್ನ ತಂದೆ ದಿ.ಹೆಚ್.ಎಸ್.ಪ್ರಕಾಶ್ ಶಾಸಕರಾಗಿದ್ದರು. ಈಗ ನಾನು ಎಂಎಲ್ಎ ಆಗಿದ್ದು, ಇದು ನನ್ನ ಸೌಭಾಗ್ಯ. ಶ್ರೀಮಠದ ಸೇವೆ ಮಾಡಲು ನಾನು ಸದಾ ಸಿದ್ಧನಿರುವುದಾಗಿ ಭರವಸೆ ನೀಡಿದರು.



ಶ್ರವಣಬೆಳಗೊಳ ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಸರ್ಕಾರಕ್ಕಿಂತಲೂ ಮಿಗಿಲಾಗಿ ಶ್ರೀಮಠವು ಬೃಹತ್ ಕ್ರೀಡಾಕೂಟ ಆಯೋಜನೆ ಮಾಡುತ್ತಿರುವುದು ಸ್ವಾಗತಾರ್ಹ. 1.60 ಲಕ್ಷ ಮಕ್ಕಳಿಗೆ ಜಾತಿ, ಧರ್ಮ, ಬೇಧ ಇಲ್ಲದೆ ಶಿಕ್ಷಣ ನೀಡುತ್ತಿರುವ ಶ್ರೀಮಠವು, ಇದರ ಜೊತೆಗೆ ಆರೋಗ್ಯ, ಕ್ರೀಡೆಗೂ ಒತ್ತು ನೀಡಿರುವುದು ಸ್ವಾಗತಾರ್ಹ ಎಂದರು. ಕ್ರೀಡೆಗಳು ಸಂಬಂಧ ಬೆಳೆಸುತ್ತವೆ. ಹಾಗಾಗಿ ಸರ್ಕಾರಗಳು ಕ್ರೀಡೆಗೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಿ ಕ್ರೀಡಾಪಟುಗಳಿಗೆ ಅನುದಾನ ಜೊತೆಗೆ ಪ್ರೋತ್ಸಾಹ ನೀಡಬೇಕೆಂದು ಆಗ್ರಹಿಸಿದರು. ಸ್ವಾಮೀಜಿ ಅವರೂ ಒತ್ತಡ ಹಾಕಬೇಕೆಂದರು.

ಸರಸ್ವತಿ, ಭಾರ್ಗವಿ, ನೇಹಾ, ರೇವತಿ ಪಿ.ಎಲ್ ಸೇರಿದಂತೆ ವಿವಿಧ ಆಟಗಳಲ್ಲಿ ಸಾಧನೆ ಮಾಡಿರುವ ಆಟಗಾರ್ತಿಯರು ತಂದ ಕ್ರೀಡಾಜ್ಯೋತಿಯನ್ನು ಅಂತಾರಾಷ್ಟ್ರೀಯ ಕ್ರೀಡಾಪಟುಗಳಾದ ಪೂನಂ ಬೆಳ್ಳಿಯಪ್ಪ, ಹರ್ಷಿತ್ ಇಂಚರಾ ಸ್ವೀಕರಿಸಿದರು.



ನಂತರ ಕ್ರೀಡಾ ಪ್ರತಿಜ್ಞೆ ಬೋಧಿಸಲಾಯಿತು. ಶಾಸಕರಾದ ಸ್ವರೂಪ್ ಪ್ರಕಾಶ್ ಮತ್ತು ಬಾಲಕೃಷ್ಣ ಹಾಗೂ ಹತ್ತಾರು ತಂಡಗಳಿಂದ ಗೌರವ ವಂದನೆ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಬಿಜಿಎಸ್ ಕ್ರೀಡಾ ಸಂಭ್ರಮ ಪುಸ್ತಕ ಬಿಡುಗಡೆ ಮಾಡಲಾಯಿತು.

ಚಿಕ್ಕಬಳ್ಳಾಪುರ-ಕೋಲಾರ ಶಾಖಾ ಮಠದ ಮಂಗಳನಾಥ ಸ್ವಾಮೀಜಿ, ಮೈಸೂರಿನ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ತಿಪಟೂರು ದಸರೀಘಟ್ಟದ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ, ಬೆಂಗಳೂರು ವಿಜಯನಗರದ ಶ್ರೀ ಸೌಮ್ಯನಾಥ ಸ್ವಾಮೀಜಿ,ಶೃಂಗೇರಿ ಮಠದ ಶ್ರೀ ಗುಣನಾಥ ಸ್ವಾಮೀಜಿ, ರಾಮನಗರದ ಅನ್ನದಾನೇಶ್ವರ ಸ್ವಾಮೀಜಿ, ಉತ್ತರ ಕನ್ನಡದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಬಿ.ಜಿ.ನಗರದ ಶ್ರೀ ಸತ್ಯಕೀರ್ತಿನಾಥ ಸ್ವಾಮೀಜಿ, ಹಾಸನದ ಶ್ರೀ ಶಂಭುನಾಥ ಸ್ವಾಮೀಜಿ, ಕಬ್ಬಳಿ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ ಪಾವನ ಸಾನಿಧ್ಯ ಹಾಗೂ ದಿವ್ಯ ಸಮ್ಮುಖವಹಿಸಿದ್ದರು.

ಕಾರ್ಯಕ್ರಮದಲ್ಲಿ ಶ್ರೀಮಠದ ಟ್ರಸ್ಟಿ ದೇವರಾಜು, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮುದ್ದೇಗೌಡ, ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಹೆಚ್.ಎಲ್. ಮಲ್ಲೇಶಗೌಡ, ಸೋಮಶೇಖರ್, ಬೇಲೂರು ನಾಗರಾಜ್, ಕೆ.ಆರ್.ಮುತ್ತಣ್ಣ ಸೋಮವಾರಪೇಟೆ ಒಕ್ಕಲಿಗರ ಸಂಘದ ಅಧ್ಯಕ್ಷ, ಗೋಪಾಲಯ್ಯ, ಭರತ್ ಕುಮಾರ್, ಆನಂದ್, ಎಸ್. ಎಸ್. ರಘುಗೌಡ, ಅನಂತ್ ಕುಮಾರ್, ಜಿ.ಡಿ.ನಾರಾಯಣ, ಹೆಚ್.ಎಸ್. ಅನಿಲ್ ಕುಮಾರ್ ಮೊದಲಾದವರಿದ್ದರು.

### ಸ್ವಾಮೀಜಿ ಕನಸು ನನಸಾಗಿದೆ

ಇದಕ್ಕೂ ಮುನ್ನ ಸ್ವಾಗತ ಜೊತೆಗೆ ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಶಂಭುನಾಥ ಸ್ವಾಮೀಜಿ, ಶ್ರೀಕ್ಷೇತ್ರವು ಶೈಕ್ಷಣಿಕ, ಸಾಂಸ್ಕೃತಿಕ, ಸಂಗೀತ, ಆಧ್ಯಾತ್ಮಿಕ ಉತ್ತೇಜನ ಜೊತೆಗೆ ಪ್ರತಿ ವರ್ಷ ಕ್ರೀಡಾಕೂಟ ಆಯೋಜನೆ ಮೂಲಕ ಕ್ರೀಡೆಗೂ ಉತ್ತೇಜನ ನೀಡುತ್ತಿದೆ ಎಂದರು.

ಓದಿನ ಜೊತೆಗೆ ಎಲ್ಲ ಮಕ್ಕಳು ಕ್ರೀಡೆಯಲ್ಲೂ ಸಾಧನೆ ಮಾಡಬೇಕು ಎಂಬುದು ಶ್ರೀಮಠದ ಉದ್ದೇಶ. ಅದಕ್ಕೆ ಪೂರಕವಾಗಿ ನಮ್ಮ ಸಂಸ್ಥೆಗಳ ಮಕ್ಕಳು ದೇಶೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುತ್ತಿರುವುದು ಸಂತೋಷದ ಸಂಗತಿ. ಈ ಮೂಲಕ ನಮ್ಮ ಸ್ವಾಮೀಜಿ ಅವರು ಕಂಡ ಕನಸು ನನಸಾಗಿದೆ ಎಂದರು.

## ಡಿ.6 ರಂದು ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನೆಲದನಿ ಫೌಂಡೇಶನ್ ವತಿಯಿಂದ ಡಿ.6 ರಂದು 69ನೇ ವರ್ಷದ ಪರಿನಿಬ್ಬಾಣದ ಅಂಗವಾಗಿ ಭೀಮ ನಮನ ಹಾಗೂ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ನೆಲದನಿ ಫೌಂಡೇಶನ್ ಅಧ್ಯಕ್ಷ ದಿಂಡಗೂರು ಸಂತೋಷ್ ಹೇಳಿದರು.

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಬಗ್ಗೆ ಮಕ್ಕಳಲ್ಲಿ ತುಂಬಿರುವ ಜ್ಞಾನವನ್ನು ಚಿತ್ರಕಲೆ ಮೂಲಕ ಮುಖ್ಯ ಭೂಮಿಕೆಗೆ ತರುವ ಸಣ್ಣ ಪ್ರಯತ್ನ ನಮ್ಮದಾಗಿದೆ ಎಂದು ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ರವರ ಕುರಿತಂತೆ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಹಾಗೂ ಸಂವಿಧಾನ ಸಂಬಂಧಿತ ವಿಷಯಗಳ ಆಧಾರಿತ ಚಿತ್ರಗಳನ್ನು ನೀಡಲಾಗುವುದು ಎಂದರು.

ತಾಲ್ಲೂಕಿನ ಪ್ರತಿ ಶಾಲೆಗೆ ಪ್ರಾಥಮಿಕ ಶಾಲೆಯಿಂದ ತಲಾ ಇಬ್ಬರು ಹಾಗೂ ಪ್ರೌಢಶಾಲೆಗಳಿಂದ ತಲಾ ಇಬ್ಬರಂತೆ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗಿದೆ. ಚಿತ್ರಕಲಾ ಸ್ಪರ್ಧಿಗೆ ಎಲ್ಲಾ ಪರಿಕರಗಳನ್ನು ವಿದ್ಯಾರ್ಥಿಗಳೆ ತರಬೇಕು. ಸಂಸ್ಥೆಯ ವತಿಯಿಂದ ಡ್ರಾಯಿಂಗ್ ಶೀಟ್ ಮಾತ್ರ ನೀಡಲಾಗುವುದು. ಸ್ಪರ್ಧೆಯು ಬೆಳಗ್ಗೆ 10.30 ರಿಂದ ಪ್ರಾರಂಭಗೊಂಡು 3 ಗಂಟೆಗಳ ಕಾಲ ನಡೆಯಲಿದೆ ಎಂದು ತಿಳಿಸಿದರು.

ಅಂಬೇಡ್ಕರ್ ಕುರಿತಾದ ಗೀತ ಗಾಯನ, ಕವನ ವಾಚನ, ಚಿತ್ರಕಲಾ ಸ್ಪರ್ಧೆ, ಮಕ್ಕಳಿಗಾಗಿ ಸಂವಿಧಾನ ಕುರಿತಾದ ರಂಗಾಟಗಳು, ಜಾನಪದ ವಾದ್ಯ ಹಾಗೂ ನೃತ್ಯ ಪ್ರದರ್ಶನಗಳು ಇರಲಿವೆ. ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ವಿವಿಧ ಸಂಘ ಸಂಸ್ಥೆಗಳು, ಮಹಿಳಾ ಸ್ವಸಹಾಯ ಹಾಗೂ ಸ್ತ್ರೀಶಕ್ತಿ ಸಂಘಗಳು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು, ಕಿರುತೆರೆ ಮತ್ತು ಚಲನಚಿತ್ರ ಕಲಾವಿದರು ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ನೆಲದನಿ ಫೌಂಡೇಶನ್ ಕಾರ್ಯದರ್ಶಿ ನಂದಿನಿ, ಡಿಎಸ್ಎಸ್ ತಾಲೂಕು ಸಂಚಾಲಕ ಮಾದಿಹಳ್ಳಿ ಮಂಜು, ಪ್ರಮುಖರಾದ ರಾಮು ಹಾಗೂ ವೆಂಕಟೇಶ್ ಪ್ರಸಾದ್ ಇದ್ದರು.

## ಆರ್ಥಿಕ ಸದೃಢತೆಯಿಂದ ಉತ್ತಮ ಜೀವನ ನಿರ್ವಹಣೆ: ಸಿಮೆಂಟ್ ಮಂಜು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು : ಆರ್ಥಿಕವಾಗಿ ಸದೃಢರಾದಾಗ ಸಮಾಜದಲ್ಲಿ ಉತ್ತಮವಾಗಿ ಜೀವನ ನಡೆಸಲು ಸಾಧ್ಯ. ಈ ನಿಟ್ಟಿನಲ್ಲಿ ರೈತರು ಸರ್ಕಾರದ ಸೌಲಭ್ಯಗಳ ಸದ್ಬಳಕೆ ಮಾಡಿಕೊಳ್ಳುವಂತೆ ಶಾಸಕ ಸಿಮೆಂಟ್ ಮಂಜು ಸಲಹೆ ನೀಡಿದರು.

ಗುರುವಾರ ತಾಲೂಕಿನ ನೇರಳಕೆರೆ ಗ್ರಾಮದಲ್ಲಿ 2023-24 ಹಾಗೂ 2024-25 ನೇ ಸಾಲಿನ ಡಿ ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿ ಫಲಾನುಭವಿಗಳ ಜಮೀನಿನಲ್ಲಿ ಕೊಳವೆಬಾವಿ ಕೊರೆಯುವ ಕಾರ್ಯಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಿ ಮಾತನಾಡಿದರು.ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಯುವ ಕಾರ್ಯವು ಕೃಷಿ ಭೂಮಿಗೆ ನೀರಾವರಿ ಒದಗಿಸುವ ಗುರಿಯನ್ನು ಹೊಂದಿದೆ.ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಳವೆ ಬಾವಿ ಕೊರೆಯಲು, ಪಂಪ್‌ಸೆಟ್ ಅಳವಡಿಸಲು ಮತ್ತು ವಿದ್ಯುದ್ದೀಕರಣಕ್ಕಾಗಿ ಸಂಪೂರ್ಣ ಸಹಾಯಧನವನ್ನು ಒದಗಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕ್ಷೇತ್ರದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ ಎಂದರು. ಕ್ಷೇತ್ರದಲ್ಲಿ ಒಟ್ಟು 35 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು ತಲಾ ಒಂದು ಕೊಳವೆ ಬಾವಿಗೆ ? 3.75 ಲಕ್ಷ ರೂಗಳಂತೆ ಸುಮಾರು ? 1.32 ಕೋಟಿ ವೆಚ್ಚದಲ್ಲಿ ಫಲಾನುಭವಿಗಳ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಲು ಚಾಲನೆ ನೀಡಿದ್ದೇನೆ.ಬಡ ಹಾಗೂ ಮಧ್ಯಮ ವರ್ಗದ ರೈತರ ಜಮೀನಿಗೆ ಉಚಿತವಾಗಿ ಕೊಳವೆಬಾವಿ ಕೊರೆಸಿಕೊಡುವ ಗಂಗಾ ಕಲ್ಯಾಣ ಯೋಜನೆಯು ಒಂದು ಉತ್ತಮ ಯೋಜನೆಯಾಗಿದ್ದು ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಂಡು ಆರ್ಥಿಕವಾಗಿ ಸದೃಢರಾಗುವಂತೆ ತಿಳಿಸಿದರು.ಕೊಳವೆ ಬಾವಿ ಕೊರೆಯುವ ವೇಳೆ ಸರ್ಕಾರ ನಿಗದಿ ಪಡಿಸಿದ ಅಡಿಗಳನ್ನು ಕೊರೆಯುವ ಸಂಧರ್ಭದಲ್ಲಿ ನೀರಿನ ಮೂಲ ಸಿಗಲು ಕೆಲವು ಅಡಿಗಳು ಬಾಕಿ ಇದ್ದರೆ ಕೊರೆಯುವ ಕಾರ್ಯ ಮುಂದುವರೆಸಿ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅಧಿಕಾರಿಗಳು ಗಮನ ಹರಿಸುವಂತೆ ಸೂಚನೆ ನೀಡಿದರು.ಈ ಸಂಧರ್ಭದಲ್ಲಿ ಡಿ. ದೇವರಾಜ್ ಅರಸು ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಾಕೇಶ್,ಮುಖಂಡರಾದ ರೇಣುಕಾ ಪ್ರಸಾದ್,ಮಾವನೂರು ಮೋಹನ್, ಕಿರಣ್ ನವೀನ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಸೆ.13 ರಂದು ಮಹಿಳಾ ನೌಕರರ ದಿನಾಚರಣೆ ಘೋಷಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಸರ್ಕಾರದ ಆಡಳಿತ ಯಂತ್ರದಲ್ಲಿ ಗಣನೀಯ ಕೊಡುಗೆ ನೀಡುತ್ತಿರುವ ಮಹಿಳಾ ನೌಕರರನ್ನು ಅಭಿನಂದಿಸಿ, ಸೆಪ್ಟೆಂಬರ್ 13 ರಂದು ಮಹಿಳಾ ನೌಕರರ ದಿನಾಚರಣೆಯಾಗಿ ಘೋಷಣೆ ಮಾಡುವ ಭರವಸೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದರು.

ಅವರು ಇಂದು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ ಬೆಂಗಳೂರು, ವತಿಯಿಂದ ಮಹಿಳಾ ಸಮ್ಮೇಳನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮಹಿಳಾ ನೌಕರರಿಗೆ ಋತುಚಕ್ರ ರಜೆಯನ್ನು ತಿಂಗಳಿಗೆ ಒಂದು ದಿನ ವೇತನ ಸಹಿತ ರಜೆಯನ್ನು ಮಂಜೂರು ಮಾಡಲು ಸರ್ಕಾರ ನಿರ್ಧರಿಸಿದೆ. ಸಂಘದ ಕಚೇರಿಯ ಕಾರ್ಯಚಟುವಟಿಕೆಗಳಿಗೆ ಬಾಲಭವನದಲ್ಲಿ ಸ್ಥಳಾವಕಾಶ ನೀಡಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರೊಂದಿಗೆ ಚರ್ಚಿಸಲಾಗಿದೆ. ಸೆಪ್ಟೆಂಬರ್ 13 ರಂದು ಮಹಿಳಾ ನೌಕರರ ದಿನಾಚರಣೆಯಾಗಿ ಘೋಷಣೆ ಮಾಡಲಾಗುವುದು ಎಂದರು.

## ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಳೇಬೀಡು: ಕನ್ನಡ ಭಾಷೆ ವಿಜ್ಞಾನ, ತಂತ್ರಜ್ಞಾನದ ಸವಾಲುಗಳನ್ನು ಎದುರಿಸಿ ಬೆಳೆಯಬೇಕಾಗಿದೆ. ಕನ್ನಡಿಗರು ಪ್ರಾಚೀನತೆ ಹೊಂದಿರುವ ಕನ್ನಡ ಭಾಷೆಯನ್ನು ಬೆಳೆಸುವತ್ತ ಹೆಜ್ಜೆ ಇಡಬೇಕಾಗಿದೆ ಎಂದು ಸಾಹಿತಿ ಟಿ.ಎಂ. ಶಿವಶಂಕರಪ್ಪ ಹೇಳಿದರು.

ಹಳೇಬೀಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಂತರಿಕ ಗುಣಮಟ್ಟ ಭರವಸಾ ಕೋಶ , ಕನ್ನಡ ವಿಭಾಗ ಹಾಗೂ ಸಾಂಸ್ಕೃತಿಕ ವೇದಿಕೆ ಆಶ್ರಯದಲ್ಲಿ ಶನಿವಾರ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಇಂಗ್ಲಿಷ್ ಪ್ರಭಾವದಿಂದ ಕನ್ನಡ ಭಾಷೆಯ ಮೇಲೆ ಧಾಳಿಯಾಗುತ್ತಿದೆ. ದೂರದರ್ಶನ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ. ಕನ್ನಡ ಭಾಷೆಯ ನೈಜತೆ ಇಲ್ಲದಂತಾಗುತ್ತಿದೆ ಎಂದರು.

ಕನ್ನಡ ಭಾಷೆ ವೈವಿಧ್ಯಮಯವಾಗಿದೆ. ಹಲವು ರಾಜ ಮನೆತನಗಳು ಕನ್ನಡ ಭಾಷೆಯನ್ನು ಬೆಳೆಸಿವೆ ಪ್ರಾಚೀನ ಕವಿಗಳಿಗೆ ಕನ್ನಡ ನಾಡಿನ ಕವಿಗಳು ಆಶ್ರಯ ನೀಡಿದ್ದರಿಂದ ಇಂದಿನ ಅಧ್ಯಯನಕ್ಕೆ ಸಾಕಷ್ಟು ಮಹಾಕಾವ್ಯಗಳು ದೊರಕಿವೆ. ಹೊಯ್ಸಳರ ನಾಡು ಹಳೇಬೀಡು ರಾಘವಾಂಕ, ಜನ್ನ ಕವಿ ಮೊದಲಾದವರು ಕಾವ್ಯ ರಚನೆ ಮಾಡಿದ ಪುಣ್ಯ ಭೂಮಿಯಾಗಿದೆ. ಅವರು ಮೆಟ್ಟಿದ ನೆಲದ ಮೇಲೆ ಓಡಾಡುತ್ತಿರುವ ಇಲ್ಲಿಯ ವಿದ್ಯಾರ್ಥಿಗಳು ಪುಣ್ಯ ಶಾಲಿಗಳು ಎಂದು ಶಿವಶಂಕರಪ್ಪ ಹೇಳಿದರು.

ಪ್ರಾಚಾರ್ಯ ಡಾ.ಶ್ರೀನಿವಾಸ ಬಿ ಕೆ ಮಾತನಾಡಿ, ಕನ್ನಡಕ್ಕಾಗಿ ಹೊಸದಾಗಿ ಏನನ್ನು ಮಾಡಬೇಕಾಗಿಲ್ಲ. ಪ್ರಾಚೀನರು ಬೆಳೆಸಿರುವ ಕನ್ನಡವನ್ನು ನಾವು ಅಭಿಮಾನದಿಂದ ಉಳಿಸಿಕೊಳ್ಳಬೇಕಾಗಿದೆ. ಕನ್ನಡ ಮರೆಯುವಷ್ಟು ಅನ್ಯ ಭಾಷೆಯ ಪ್ರಭಾವಕ್ಕೆ ಒಳಗಾಗಬಾರಾದು. ಪರ ಭಾಷೆಯನ್ನು ಗೌರವಿಸುತ್ತಾ, ಕನ್ನಡ ಭಾಷೆಯನ್ನು ಬೆಳೆಸಬೇಕು ಎಂದರು.

ಪತ್ರಕರ್ತ ಎಚ್.ಎಸ್.ಅನಿಲ್ ಕುಮಾರ್ ಮಾತನಾಡಿ, ಭಾಷೆ ವಿಭಿನ್ನವಾಗಿದ್ದರೂ ಗ್ರಾಮೀಣ ಪ್ರದೇಶದ ಜನರು ಕನ್ನಡವನ್ನು ಉಳಿಸಿ ಬೆಳೆಸಿದ್ದಾರೆ. ಜನಪದದಲ್ಲಿ ಕೇಳಿ ಬಂದ ಮಾಹಿತಿಗಳಿಂದ ಇತಿಹಾಸದ ಹೆಚ್ಚಿನ ಅಧ್ಯಯನಕ್ಕೆ ಸಹಕಾರಿಯಾಗಿದೆ. ಹಳ್ಳಿಗರು ಕಲೆ, ಇತಿಹಾಸ, ಸಂಸ್ಕೃತಿಯನ್ನು ಉಳಿಸಿದ್ದಾರೆ ಎಂದರು.

ಕನ್ನಡ ವಿಭಾಗ ಮುಖ್ಯಸ್ಥ ಬಿ ಇ ಶಿವರಾಜ ಕುಮಾರ, ಐಕ್ಯೂಎಸಿ ಸಂಚಾಲಕ ಡಾ.ಅಭಿಷೇಕ್ ಎನ್, ಆಯ್ಕೆಶ್ರೇಣಿ ಗ್ರಂಥಪಾಲಕ ಮನೋಜ್ ಕುಮಾರ್ ಕೆ ಎಸ್, ಕಚೇರಿ ಅಧೀಕ್ಷಕ ದಿವಾಕರ ಎ ಸಿ ಪ್ರಾಧ್ಯಾಪಕರಾದ , ದಶರಥ ಕೆ.ಟಿ, ಚಂದ್ರಶೇಖರ ಸಿಂಗ್, ಶಂಕರಪ್ಪ, ಡಿಂಪಲ್, ತಿಮ್ಮನಾಯಕ, ರಾಘವೇಂದ್ರ ಕೆ ಬಿ, ರೇಷ್ಮಾ ಭಾನು, ಮಹೇಶ್ ಆರ್ ಸಿ, ನೂರ್ ಆಯಿಷಾ, ರೋಹನ್ ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

## ರಾತ್ರೋರಾತ್ರಿ ಕಾಫಿ ಗಿಡದಿಂದಲೇ ಹಣ್ಣು ಕದ್ದುಕೊಯ್ದರು!

ಹಾಸನ: ಈವರೆಗೂ ಕಣದಲ್ಲಿ ಒಣಗಲು ಹಾಕಿದ್ದ ಕಾಫಿ ಬೀಜಗಳನ್ನು ರಕ್ಷಿಸಿಕೊಳ್ಳಲು ಪರದಾಡಬೇಕಿದ್ದ ಬೆಳೆಗಾರರು ಈಗ ಗಿಡದಲ್ಲಿರುವ ಕಾಫಿ ಹಣ್ಣುಗಳನ್ನು ರಕ್ಷಿಸಿಕೊಳ್ಳಲು ಕಾವಲು ಕಾಯಬೇಕಾದ ಸ್ಥಿತಿ ಬಂದಿದೆ.

ಹೌದು, ಬೇಲೂರು ತಾಲೂಕು ವಾಟೇಹಳ್ಳಿ ಗ್ರಾಮದ ಹಸಿರು ಗುಡ್ಡ ಎಸ್ಟೇಟ್‌ನಲ್ಲಿ ಗಿಡದಲ್ಲಿದ್ದ ಕಾಫಿ ಹಣ್ಣುಗಳನ್ನೇ ಕಳ್ಳರು ರಾತ್ರೋ ರಾತ್ರಿ ಕದ್ದೊಯ್ದಿರುವ ಘಟನೆ ನಡೆದಿದೆ. ಎಸ್ಟೇಟ್ ರೈಟರ್ ಕುಮಾರ್ ಅವರು ಮಂಗಳವಾರ ಸಂಜೆ ಕಾರ್ಮಿಕರೊಂದಿಗೆ ಕಾಫಿ ಕೊಯ್ಲು ಮುಗಿಸಿ ಹಿಂದಿರುಗಿದ್ದು, ಮರುದಿನ ಕೆಲಸ ಮುಂದುವರಿಸಲು ಹೋದಾಗ ಗಿಡದಲ್ಲಿದ್ದ ಸುಮಾರು 50 ಕೆಜಿ ಹಣ್ಣುಗಳನ್ನು ಕಳ್ಳರು ಕದ್ದೊಯ್ದಿರುವುದು ಗೊತ್ತಾಗಿದೆ. ಈ ಸಂಬಂಧ ಕುಮಾರ್ ಅವರು ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

## ಕಾರ್ಮಿಕರು ದೇಶದ ಬೆನ್ನೆಲುಬು : ಶಾಸಕ ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಆಲೂರು: ಕಾರ್ಮಿಕರು ನಮ್ಮ ದೇಶದ ಬೆನ್ನೆಲುಬು, ದೇಶದ ಅಭಿವೃದ್ಧಿಯಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಗುರುವಾರ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದ್ದ ಬ್ರಿಡ್ಜ್ ಕೋರ್ಸ್ ತರಬೇತಿ ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಸುರಕ್ಷತಾ ಕಿಟ್ ವಿತರಿಸಿ ಮಾತನಾಡಿದರು.

ದುಶ್ಚಟಕ್ಕೆ ಬಲಿಯಾದ ವ್ಯಕ್ತಿಯ ಆರೋಗ್ಯ ಹಾಳಾಗುವುದಲ್ಲದೆ, ಅವರ ಕುಟುಂಬ ಮತ್ತು ಸಮಾಜದ ಶಾಂತಿ ಸಹ ಹಾಳಾಗುವುದುಟ ಆದ್ದರಿಂದ ಕಾರ್ಮಿಕರು

ದುಶ್ಚಟಗಳಿಂದ ದೂರ ಇದ್ದು ನಿಮ್ಮನ್ನೇ ನಂಬಿರುವ ನಿಮ್ಮ ಕುಟುಂಬಕ್ಕೆ ಆಧಾರವಾಗಿರಬೇಕು ಎಂದು ಕಿವಿಮಾತು ಹೇಳಿದರು.

ಅಸಂಘಟಿತ ವಲಯದಲ್ಲಿರುವ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಟಇ- ಶ್ರಮ್‌ಟ ಯೋಜನೆಯನ್ನು ಆರಂಭಿಸಿದೆ. ಈ ಯೋಜನೆಗೆ ಕಟ್ಟಡ ನಿರ್ಮಾಣ ಕಾರ್ಮಿಕರು, ವಲಸೆ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಕೃಷಿ ಕಾರ್ಮಿಕರು, ಚಾಲಕರು, ಮನೆಗೆಲಸದವರು ಸೇರಿ 379 ವರ್ಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಸೇರ್ಪಡೆ ಮಾಡಲಾಗಿದೆ.ವಾರ್ಷಿಕ ಶೈಕ್ಷಣಿಕ ನೆರವು,ವೈದ್ಯಕೀಯ ನೆರವು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ ಎಂದರು.ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಹಲವಾರು ಯೋಜನೆ ಮತ್ತು ಸೌಲಭ್ಯಗಳನ್ನು ಜಾರಿಗೊಳಿಸಿದ್ದರೂ, ಅರ್ಹರಿಗೆ ಸಮರ್ಪಕವಾಗಿ ತಲುಪುತ್ತಿಲ್ಲ ಎಂಬ ದೂರುಗಳು ಕಾರ್ಮಿಕರ ವಲಯದಿಂದ ವ್ಯಾಪಕವಾಗಿ ಕೇಳಿ ಬರುತ್ತಿವೆ ಈ ಕುರಿತು ಇಲಾಖೆ ಅಧಿಕಾರಿಗಳು ಕಾರ್ಮಿಕರಿಗೆ ಅರಿವು ಮೂಡಿಸುವ ಕೆಲಸವಾಗಬೇಕು. ಹಾಗಾಗಿ ಆಲೂರು ತಾಲೂಕಿನಲ್ಲಿ ಕಾರ್ಮಿಕ ಕಚೇರಿ ಇಲ್ಲದೆ ಇರುವುದ್ದರಿಂದ ತಾತ್ಕಾಲಿಕವಾಗಿ ಕಚೇರಿ ತೆರೆದು ಕಾರ್ಮಿಕರ ಗುರುತಿನ ಚೀಟಿ ಹಾಗೂ ಗುರುತಿನ ಚೀಟಿಯ ನವೀಕರಣ ಕಾರ್ಯ ಪ್ರಾರಂಭ ಮಾಡುವಂತೆ ಸೂಚನೆ ನೀಡಿದರು.

ಶ್ರಮಿಕ ವರ್ಗವೇ ಪ್ರಸ್ತುತ ದೇಶದ ಸಂಪತ್ತು. ರಕ್ತದ ಜತೆ ಶ್ರಮ ಬೆರೆಸಿ ದೊಡ್ಡ ಕಟ್ಟಡ, ಅಣೆಕಟ್ಟು, ಕೆರೆಗಳನ್ನು ಕಟ್ಟಿದ್ದಾರೆ.

ಶ್ರಮಿಕರಿಗೆ ಸರ್ಕಾರದಿಂದ ನ್ಯಾಯಯುತವಾಗಿ ದೊರೆಯಬೇಕಾದ ಸೌಲಭ್ಯ ಒದಗಿಸಲು ಕಾರ್ಮಿಕರ ಜತೆಯಲ್ಲಿ ಸದಾ ಇರುವುದಾಗಿ ಈ ಸಂದರ್ಭದಲ್ಲಿ ಭರವಸೆ ನೀಡಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಯಮುನಾ ಮಾತನಾಡಿ,ವೈದ್ಯಕೀಯ ನೆರವಿಗಾಗಿ ವಾರ್ಷಿಕ ಗರಿಷ್ಠ 25 ಸಾವಿರ ರೂ. ನೀಡಲಾಗುತ್ತದೆ. ಸಾಮಾನ್ಯ ವೈದ್ಯಕೀಯ ತಪಾಸಣೆಗೆ 1 ಸಾವಿರ ರೂ. ನೀಡಲಾಗುತ್ತದೆ. ಅಲ್ಲದೆ ಮಹಿಳಾ ಕಾರ್ಮಿಕರಿಗಾಗಿ ಹೆರಿಗೆ ಸೌಲಭ್ಯದ ನೆರವು ರೂಪದಲ್ಲಿ 10 ಸಾವಿರ ರೂ. ಸಿಗುತ್ತದೆ ಎಂದು ಇಲಾಖೆ ವತಿಯಿಂದ ಸಿಗುವ ಸೌಲಭ್ಯಗಳ ಕುರಿತು ಸಭೆಯಲ್ಲಿ ಕಾರ್ಮಿಕರಿಗೆ ಮಾಹಿತಿ ಒದಗಿಸಿದರು.

ಇದೆ ವೇಳೆ ವಿವಿಧ ಕ್ಷೇತ್ರಗಳ 260 ಕಾರ್ಮಿಕರಿಗೆ ಸುರಕ್ಷಿತ ಕಿಟ್ ವಿತರಣೆ ಮಾಡಲಾಯಿತು.

ಈ ಸಂಧರ್ಭದಲ್ಲಿ ಆಲೂರು ಹಿರಿಯ ಕಾರ್ಮಿಕ ನಿರೀಕ್ಷಕ ಆನಂದ್ ರಾಮ್, ಡಿ.ದೇವರಾಜ್ ಅರಸು ನಿಗಮ ಜಿಲ್ಲಾ ವ್ಯವಸ್ಥಾಪಕ ಟಿ.ರಾಕೇಶ್, .ದೇವರಾಜ್ ಅರಸು ನಿಗಮ ಸಹಾಯಕ ಅಭಿವೃದ್ಧಿ ಅಧಿಕಾರಿ ಎಂ. ಇ ಶೋಭಾ ಮುಖಂಡರಾದ ಕೃಷ್ಣಮೂರ್ತಿ, ವೆಂಕಟೇಶ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248